# ನೀರೆಯರ ತಾಕತ್ತಿನ ಪ್ರತೀಕ ಈ ನೀರಾ



'ನಾನು ತುಂಬಾ ಚಿಕ್ಕವಳಿದ್ದಾಗ ನನ್ನ ತಂದೆ–ತಾಯಿ ಬೇರೆಯಾದರು. ಸಾಮಾಜಿಕ ಭದ್ರತಾ ಯೋಜನೆಗಳ ಮೂಲಕ ವಿತರಣೆಯಾಗುತ್ತಿದ್ದ ಆಹಾರ ಪದಾರ್ಥಗಳೇ ಆಗ ನಮಗೆ (ಅಮ್ಮ–ಮಕ್ಕಳು) ಜೀವನಾಧಾರವಾಗಿದ್ದವು. ಅಂತಹ ಎಲ್ಲ ಸಾಮಾಜಿಕ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳುವ ಹುದ್ದೆಗೆ ನಾನೀಗ ನಾಮನಿರ್ದೇಶನಗೊಂಡಿದ್ದೇನೆ. ಜೀವನ ನಿರ್ವಹಣೆಗೆ ಪರದಾಡುವ ನನ್ನಂತಹ ಕುಟುಂಬಗಳೆಲ್ಲ ಗೌರವದಿಂದ ಬಾಳುವೆ ನಡೆಸುವಂತೆ ನೋಡಿಕೊಳ್ಳಬೇಕಾದ ಹೊಣೆಗಾರಿಕೆ ಈ ಹುದ್ದೆಗಿದೆ. ನನ್ನಲ್ಲೀಗ ಗೌರವದ ಭಾವನೆ ಮೂಡಿದೆ...'

–ಅಮೆರಿಕದ ನಿಯೋಜಿತ ಅಧ್ಯಕ್ಷ ಜೋ ಬೈಡನ್ ಅವರಿಂದ ನಿರ್ವಹಣೆ ಹಾಗೂ ಬಜೆಟ್ ಕೇಂದ್ರದ (ಒಎಂಬಿ) ನಿರ್ದೇಶಕರ ಹುದ್ದೆಗೆ ನಾಮನಿರ್ದೇಶನಗೊಂಡ ಬಳಿಕ ನೀರಾ ಟಂಡನ್ ಮಾಡಿದ ಭಾವನಾತ್ಮಕ ಟ್ವೀಟ್ ಇದು. ಅವರ ಸಾಮಾಜಿಕ ಬದ್ಧತೆಗೆ ಇದಕ್ಕಿಂತ ಬೇರೆ ಸಾಕ್ಷಿ ಇನ್ನೇನು ಬೇಕು?

ಅಂದಹಾಗೆ, ನೀರಾ ಅವರು ಭಾರತೀಯ ಮೂಲದ ಅಮೆರಿಕನ್ ಪ್ರಜೆ. ಒಎಂಬಿ ಹುದ್ದೆಗೆ ಪರಿಗಣಿತವಾಗಿರುವ ಏಷ್ಯನ್ ಮೂಲದ ಮೊದಲ ಮಹಿಳೆ. ಆ ಹುದ್ದೆಯನ್ನು ಅಲಂಕರಿಸಲಿರುವ ಕಪ್ಪುವರ್ಣದ ಮೊದಲ ವ್ಯಕ್ತಿ ಎಂಬ ಹಿರಿಮೆಯೂ ಅವರದಾಗಲಿದೆ. ಹಣಕಾಸು ವಿಷಯದಲ್ಲಿ ಪ್ರಭುತ್ವ ಹೊಂದಿರುವ ನೀರಾ ಅವರದು ನೀತಿ ನಿರೂಪಣೆಯಲ್ಲೂ ಎತ್ತಿದ ಕೈ. ಸ್ತ್ರೀಪರ ಚಳವಳಿಗಳಲ್ಲಿ ಸಕ್ರಿಯವಾಗಿ ಗುರ್ತಿಸಿಕೊಂಡವರು. ಚುನಾವಣಾ ಪ್ರಚಾರದ ತಂತ್ರಗಾರಿಕೆಗೂ ಹೆಸರಾದವರು. ಪ್ರಗತಿಪರ ಚಿಂತಕರ ಚಾವಡಿ ಎನಿಸಿದ 'ಸೆಂಟರ್ ಫಾರ್ ಅಮೆರಿಕನ್ ಪ್ರೊಗ್ರೆಸ್'ನ ಅಧ್ಯಕ್ಷ ಹಾಗೂ ಸಿಇಒ ಹುದ್ದೆಗಳೆರಡನ್ನೂ ಯಶಸ್ವಿಯಾಗಿ ನಿಭಾಯಿಸಿಕೊಂಡು ಬಂದವರು.

ಹೊಂಗನಸು ಹೊತ್ತ ಸಾವಿರಾರು ಯುವ ಭಾರತೀಯರಂತೆ ನೀರಾ ಅವರ ಅಮ್ಮ ಮಾಯಾ ಟಂಡನ್ ಕೂಡ ಆರು ದಶಕಗಳ ಹಿಂದೆ ಅಮೆರಿಕಕ್ಕೆ ವಲಸೆ ಹೋದವರು. ಬಾಳಸಂಗಾತಿ ಜತೆಗಿದ್ದರೆ 'ಅಮೆರಿಕದ ಕನಸ'ನ್ನು ನನಸು ಮಾಡಿಕೊಳ್ಳುವ ಕೆಲಸ ಇನ್ನೂ ಸಲೀಸು ಎಂದು ಮಾಯಾ ಮದುವೆಯಾದಾಗ ಸಂಸಾರ ಸುಂದರವಾಗಿ ತೋರಿತ್ತು.

ಮಸ್ಸಾಚುಸೆಟ್ಸ್ ಪ್ರಾಂತ್ಯದ ಬೆಡ್‌ಫೋರ್ಡ್‌ನಲ್ಲಿ ನೆಲೆ ಕಂಡುಕೊಂಡಿದ್ದ ಟಂಡನ್ ದಂಪತಿಗೆ ಇಬ್ಬರು ಮಕ್ಕಳೂ (ನೀರಾ ಮತ್ತು ರಾಜ್) ಆದರು. ಬಳಿಕ ದಾಂಪತ್ಯದಲ್ಲಿ ಬಿರುಕು ಮೂಡಿದ್ದರಿಂದ ಡೈವೋರ್ಸ್ ಪಡೆದ ಮಾಯಾ, ಮಕ್ಕಳನ್ನು ಕಟ್ಟಿಕೊಂಡು ಸರ್ಕಾರಿ ವಸತಿ ಯೋಜನೆಯ ನೆರವಿನಿಂದ ಆಶ್ರಯ ಪಡೆದರು. ಸಾಮಾಜಿಕ ಭದ್ರತಾ ಯೋಜನೆಗಳ ಮೂಲಕ ಹಸಿವನ್ನೂ ಇಂಗಿಸಿಕೊಂಡರು. ಎರಡು ವರ್ಷಗಳ ಬಳಿಕ ಮಾಯಾ ಅವರು ಟ್ರಾವೆಲ್ ಏಜೆಂಟ್ ಆಗಿ ನೇಮಕಗೊಂಡ ಮೇಲೆ ಮನೆಯ ಪರಿಸ್ಥಿತಿ ಸುಧಾರಿಸುತ್ತಾ ಬಂತು.

'ಭಾರತಕ್ಕೆ ಹಿಂದಿರುಗುವುದೋ ಇಲ್ಲವೆ ಅಮೆರಿಕದಲ್ಲಿಯೇ ಉಳಿದು ಹೋರಾಡುವುದೋ ಎಂಬ ಗೊಂದಲದಲ್ಲಿ ಮುಳುಗಿದ್ದ ಅಮ್ಮ ಎರಡನೆಯದನ್ನೇ ಆಯ್ಕೆ ಮಾಡಿಕೊಂಡಳು. ನಮ್ಮ ಕುಟುಂಬ ಎದುರಿಸಿದ ಕಡು ಸಂಕಷ್ಟದ ದಿನಗಳವು. ಎಲ್ಲ ರಿಸ್ಕ್ ತೆಗೆದುಕೊಂಡು ಅಮ್ಮ ಇಲ್ಲಿಯೇ ಇದ್ದು ನನ್ನನ್ನು ಬೆಳೆಸದಿದ್ದರೆ ನಾನು ಖಂಡಿತಾ ಇಷ್ಟೊಂದು ದೊಡ್ಡ ಹುದ್ದೆಯ ಸನಿಹಕ್ಕೆ ಹೋಗಲು ಸಾಧ್ಯವಿರಲಿಲ್ಲ' ಎಂದು ವಿನೀತರಾಗಿ ಹೇಳುತ್ತಾರೆ ನೀರಾ.

ಯಾಲೆ ವಿಶ್ವವಿದ್ಯಾಲಯದಿಂದ ಕಾನೂನು ಪದವೀಧರೆ ಆಗಿರುವ ನೀರಾ, ವಿದ್ಯಾರ್ಥಿ ದೆಸೆಯಿಂದಲೇ ಚುನಾವಣಾ ಸ್ಪರ್ಧೆ ಹಾಗೂ ಪ್ರಚಾರದಲ್ಲಿ ಆಸಕ್ತಿ ಬೆಳೆಸಿಕೊಂಡವರು. ಎಡಪಂಥೀಯ ವಿಚಾರಧಾರೆಯ ಅವರು, ಸಹಜವಾಗಿಯೇ ಡೆಮಾಕ್ರಟಿಕ್ ಪಕ್ಷದತ್ತ ಒಲಿದವರು. ಡೆಮಾಕ್ರಟಿಕ್ ಪಕ್ಷದಿಂದ ಅಧ್ಯಕ್ಷೀಯ ಹುದ್ದೆಯ ಆಕಾಂಕ್ಷಿಗಳಾಗಿದ್ದ ಹಲವರ ಪ್ರಚಾರ ತಂಡದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ಬರಾಕ್ ಒಬಾಮ ಅವರು ಅಧ್ಯಕ್ಷರಾಗಿದ್ದಾಗ ಆರೋಗ್ಯ ಕ್ಷೇತ್ರದ ಸಲಹೆಗಾರ್ತಿಯಾಗಿದ್ದ ನೀರಾ, 'ಒಬಾಮಕೇರ್' ಎಂದೇ ಹೆಸರಾದ ಆರೋಗ್ಯ ಯೋಜನೆಯನ್ನು ರೂಪಿಸಿದ ತಂಡದ ಪ್ರಮುಖ ಸದಸ್ಯೆಯಾಗಿದ್ದವರು.

ಹಿಲರಿ ಕ್ಲಿಂಟನ್ ಅವರ ಅನುಯಾಯಿಯಾಗಿದ್ದ ನೀರಾ, 2016ರ ಚುನಾವಣೆಯಲ್ಲಿ ಅವರ ಪ್ರಚಾರ ತಂಡದಲ್ಲೂ ಇದ್ದವರು. ಕಲಾವಿದ ಬೆಂಜಮಿನ್ ಎಡ್ವರ್ಡ್ಸ್ ಅವರನ್ನು ನೀರಾ ಅವರು ವರಿಸುವುದು ನಿಶ್ಚಯವಾದಾಗ ಶ್ವೇತ ಭವನದಲ್ಲಿ ಈ ಜೋಡಿಗೆ ಹಿಲರಿ ಅವರು ಟ್ರೀಟ್ ಕೊಟ್ಟಿದ್ದರು.

ಐವತ್ತು ವರ್ಷದ ನೀರಾ, ಇದುವರೆಗೆ ಕ್ರಮಿಸಿದ ಹಾದಿ ಹೂವಿನ ಹಾಸಿಗೆಯದೇನೂ ಅಲ್ಲ. ಹಲವು ಏಳು–ಬೀಳುಗಳನ್ನು ಕಂಡಿರುವ ಆಕೆ, ಅಂದುಕೊಂಡದ್ದನ್ನು ಸಾಧಿಸುವ ಹಟತೊಟ್ಟ ಛಲಗಾರ್ತಿ. ವಿವಾದಗಳಿಗೂ ಅವರು ಹೆಸರುವಾಸಿ. ಬೈಡನ್ ಹಾಗೂ ಒಬಾಮ ಅವರನ್ನು ಟೀಕಿಸುವಲ್ಲಿಯೂ ಹಿಂಜರಿದವರಲ್ಲ. ಟ್ವೀಟ್ ಮೂಲಕ ಕಾಲುಕೆದರಿ ಜಗಳ ತೆಗೆಯುತ್ತಾರೆ ಎಂಬ ಕುಖ್ಯಾತಿಯೂ ಅವರಿಗೆ ಅಂಟಿಕೊಂಡಿದೆ. ಒಎಂಬಿ ಹುದ್ದೆಗೆ ನಾಮನಿರ್ದೇಶನಗೊಂಡ 2–3 ದಿನಗಳಲ್ಲಿ ಸಾವಿರ ಟ್ವೀಟ್‌ಗಳನ್ನು ಅವರು ಅಳಿಸಿಹಾಕಿದ್ದಾರಂತೆ. 2008ರ ಚುನಾವಣೆಯಲ್ಲಿ ಕ್ಲಿಂಟನ್ ಪರ ಪ್ರಚಾರ ಕೈಗೊಂಡಿದ್ದ ನೀರಾ, ಎದುರಾಳಿ ತಂಡದ ಸದಸ್ಯರೊಬ್ಬರಿಗೆ ಬಾರಿಸಿದ ಕುರಿತು ದೂರಿದೆ. ಈಗ ಅವರ ನಾಮನಿರ್ದೇಶನಕ್ಕೂ ಅಪಸ್ವರ ಎದ್ದಿದೆ. ಆದರೆ, ಎಲ್ಲ ಅಡೆತಡೆಗಳನ್ನೂ ಮೆಟ್ಟಿನಿಲ್ಲುವ ತಾಕತ್ತು ಅವರಿಗಿದೆ.

■ **ಪ್ರವೀಣ ಕುಲಕರ್ಣಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65